

## ತಮಾಷೆಯಾಗಿ ಸ್ವೀಕರಿಸಿ!

★ ಹೊರಸಂಬಂಧಗಳಲ್ಲಿ ಸಂಗಾತಿಗಳ ವಯಸ್ಸಿನ ವ್ಯತ್ಯಾಸ ಹೆಚ್ಚಾಗಿರುವ ಸಾಧ್ಯತೆಗಳಿರುವುದರಿಂದ ವಯಸ್ಸಾದ ಸಂಗಾತಿಯ ಹೃದಯದ ಮೇಲೆ ಹೆಚ್ಚಿನ ಒತ್ತಡವುಂಟಾಗುತ್ತದೆ ಎನ್ನುವುದು ಒಂದು ಸಮೀಕ್ಷೆಯ ತೀರ್ಮಾನ. ಪುರುಷರ ಶಿಶ್ನಗಳಿಗೆ ಆಗುವ ಗಾಯಗಳು ಮತ್ತು ಅವರ ಸಂಭೋಗ ಸಮಾಧಿ (ಕಾಯಿಟಲ್ ಡೆತ್) ಕೂಡ ಹೊರಸಂಬಂಧದಲ್ಲಿಯೇ ಹೆಚ್ಚು!

★ ತನ್ನ ಕಾರ್ಯದರ್ಶಿಣಿಯರು ಮತ್ತಿತರ ಸಾಕಷ್ಟು ಮಹಿಳೆಯರ ಜೊತೆಗೆ ಸಂಬಂಧಗಳನ್ನು ಇಟ್ಟುಕೊಂಡಿದ್ದ ಅಮೆರಿಕಾದ ಅಧ್ಯಕ್ಷ ಜಾನ್ ಕೆನಡಿ ಹೇಳುತ್ತಿದ್ದುದು– ಪ್ರತಿದಿನ ಲೈಂಗಿಕ ಕ್ರಿಯೆ ನಡೆಸದಿದ್ದರೆ ನನಗೆ ತಲೆನೋವು ಬರುತ್ತದೆ!

★ ಬಿಂಗ್‌ಹ್ಯಾಮ್‌ಟನ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಜೂಜು, ಕುಡಿತ ಮುಂತಾದವುಗಳಿಗೆ ಕಾರಣವಾಗುವ ಜೀನ್ಸ್‌ಗಳಲ್ಲಿನ ವ್ಯತ್ಯಾಸ ಹೊರಸಂಬಂಧಕ್ಕೂ ಮೂಲವಾಗಬಹುದು ಎಂದು ಹೇಳಿದ್ದಾರೆ!

ಕುಟುಂಬಗಳಲ್ಲಿ ಮಾತ್ರ. ಹಾಗಾಗಿ ನಮ್ಮ ಸಿನಿಮಾ ಅಥವಾ ಧಾರಾವಾಹಿಗಳಲ್ಲಿ ಕೆಲವೊಮ್ಮೆ ತೋರಿಸುವಂತೆ ಗಂಡಸರೆಲ್ಲಾ ವಂಚಕರು, ಹೆಂಗಸರೆಲ್ಲಾ ಸ್ವಾರ್ಥಿಗಳು ಎನ್ನುವುದು ಕೇವಲ ಆ ಕಥೆಯ ಲೇಖಕನ, ನಿರ್ದೇಶಕನ ಮನಸ್ಥಿತಿಯ ಪ್ರತಿಬಿಂಬವೇ ಹೊರತು ಸಾಮಾಜಿಕ ವಾಸ್ತವವಲ್ಲ.

(ಲೇಖಕರ ಮೊಬೈಲ್: 94805–05258)

ಸಮ್ಮತಿಯ ಮೇರೆಗೆ ಎರಡನೆಯ ಮದುವೆಯಾದರೆ ಅದು ವಿವಾಹೇತರ ಸಂಬಂಧ ಆಗುವುದಿಲ್ಲ. ಮೋಸ ಮಾಡಿ ಆಗಿದ್ದೇ ಆದಲ್ಲಿ, ಅದು ಅಪರಾಧ.

**★ ವ್ಯಭಿಚಾರಕ್ಕೂ (adultary), ವಿವಾಹೇತರ ಸಂಬಂಧಕ್ಕೂ (extra marital affair) ಇರುವ ವ್ಯತ್ಯಾಸವೇನು?**

ಮೇಲ್ನೋಟಕ್ಕೆ ಇವೆರಡೂ ಒಂದೇ ಆದರೂ ಎರಡರ ನಡುವೆ ತೆಳುವಾದ ಗೆರೆ ಇದೆ. ವ್ಯಭಿಚಾರವಾಗಬೇಕಿದ್ದರೆ ಅಲ್ಲಿ ಲೈಂಗಿಕ ಸಂಪರ್ಕ ನಡೆಯಬೇಕು. 'ವಿವಾಹೇತರ ಸಂಬಂಧ'ದಲ್ಲಿ ಮಾನಸಿಕವಾಗಿಯೂ ಸಂಬಂಧ ಇರಲಿಕ್ಕೆ ಸಾಕು.

**★ ವಿವಾಹೇತರ ಸಂಬಂಧ ಹೊಂದಬೇಕೆಂಬ ಆಸೆಯಾಗುವುದೇಕೆ?**

ಇದಕ್ಕೆ ಕಾರಣಗಳು ಹಲವಾರು. ಆದರೆ 22 ವರ್ಷಗಳ ವೃತ್ತಿ ಜೀವನದಲ್ಲಿ ನಾನು ಕಂಡುಕೊಂಡಿದ್ದೇನೆಂದರೆ, ದಂಪತಿ ನಡುವೆ ಲೈಂಗಿಕ ಸಂಪರ್ಕದ ಕೊರತೆ. ಅದನ್ನು ಬಿಟ್ಟರೆ, ಇಬ್ಬರ ನಡುವೆ ಭಾವನಾತ್ಮಕ ಸಂಬಂಧದಲ್ಲಿ ಕೊರತೆ ಇರುವುದು. ತನ್ನ ಮಾತನ್ನು ಕೇಳುವಷ್ಟು ವ್ಯವಧಾನ ಗಂಡ/ ಹೆಂಡತಿಗೆ ಇಲ್ಲ ಎಂದಾದಾಗ ಅದನ್ನು ಹೇಳಿಕೊಳ್ಳಲು ಇನ್ನೊಬ್ಬರನ್ನು ಹುಡುಕುವುದು ಅನಿವಾರ್ಯ ಆಗುತ್ತದೆ. ಆಗ ಸಹಜವೆಂಬಂತೆ ವಿರುದ್ಧ ಲಿಂಗದವರ ಜೊತೆ ಆಕರ್ಷಣೆ ಹೆಚ್ಚಾಗುತ್ತದೆ. ಅವರೇನಾದರೂ ಇವರ ಸಮಸ್ಯೆ ಸಮಾಧಾನಚಿತ್ತದಿಂದ ಆಲಿಸುವುದು (ಅಥವಾ ಆಲಿಸಿದಂತೆ ಮಾಡುವುದು...) ಅದಕ್ಕೆ ಪರಿಹಾರ ಸೂಚಿಸುವುದು ಮಾಡಿದರೆ, ಅದೇ ಮುಂದುವರಿದು ಅವರ ನಡುವೆ ಸಲುಗೆ ಹೆಚ್ಚಾಗಿ ಅಲ್ಲಿ 'ಸಂಬಂಧ' ಉಂಟಾಗುತ್ತದೆ.

**★ ಅಕ್ರಮ ಸಂಬಂಧದ ಬಗ್ಗೆ ತಿಳಿದರೆ, ಮುಂದೆ...?**

ಕಾನೂನಿನ ದಾರಿಯಲ್ಲಿ ಹೋಗುವುದಾದರೆ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಭಾರತೀಯ ದಂಡ ಸಂಹಿತೆಯ 497ನೇ ಕಲಮಿನ ಅಡಿ ಇದು ಅಪರಾಧ. ಯಾರಿಗೆ ಇದರಿಂದ ಮೋಸ ಆಗಿದೆಯೋ (ಗಂಡ ಅಥವಾ ಹೆಂಡತಿ) ಅವರೇ ಮೊಕದ್ದಮೆ ದಾಖಲು ಮಾಡಬೇಕು. ಅಕ್ರಮ ಸಂಬಂಧ ಹೊಂದಿರುವುದು ಸಾಬೀತಾದರೆ ಅಂಥವರಿಗೆ ಗರಿಷ್ಠ ಐದು ವರ್ಷಗಳ ಶಿಕ್ಷೆ ಇದೆ. ಜೊತೆಯಾಗಿ ಬಾಳಲು ಸಾಧ್ಯವೇ ಇಲ್ಲ ಎಂದಾದಲ್ಲಿ ವಿಚ್ಛೇದನಕ್ಕೆ ಅರ್ಜಿಯನ್ನೂ ಸಲ್ಲಿಸಬಹುದು. ಇಲ್ಲದಿದ್ದರೆ, ತನಗೆ ಆತ/ ಆಕೆಯ ಜೊತೆ ಬಾಳಲು ಸಾಧ್ಯವಾಗುತ್ತಿಲ್ಲ ಎಂದು ದೂರಿ ಜೀವನಾಂಶವನ್ನೂ ಕೇಳಲು ಅವಕಾಶವಿದೆ.

**★ ಅಕ್ರಮ ಸಂಬಂಧ ಸಾಬೀತು ಮಾಡುವುದು ಕಷ್ಟವಲ್ಲವೇ?**

ನಿಜ. ಅವರಿಬ್ಬರೂ ಜೊತೆಯಾಗಿರುವ ಫೋಟೊಗಳು, ಇಬ್ಬರ ನಡುವೆ ಮೊಬೈಲ್ ಅಥವಾ ಚಾಟ್ ಮೂಲಕ ನಡೆದಿರುವ ಸಂಭಾಷಣೆಗಳು... ಹೀಗೆ ಇಂಥ ಸಾಕ್ಷ್ಯಾಧಾರಗಳ ಮೂಲಕ ಆರೋಪಿಯನ್ನು ಅಪರಾಧಿ ಮಾಡಬಹುದು. ಸತ್ಯಾಸತ್ಯತೆಯನ್ನು ಪರಿಶೀಲಿಸಿ ಕೋರ್ಟ್ ತೀರ್ಪು ನೀಡುತ್ತದೆ. ಈಗ ಮೊಬೈಲ್ ಫೋನ್ ಇರುವುದರಿಂದ ಸಾಬೀತು ಮಾಡುವುದು ಹಿಂದಿನಷ್ಟು ಕಷ್ಟವಲ್ಲವಾದರೂ ಇಂಥ ಪ್ರಕರಣಗಳು ಕೋರ್ಟ್‌ನಲ್ಲಿ ನಿಲ್ಲುವುದು ಕಷ್ಟವೇ.

**★ ಕೋರ್ಟ್ ಹೊರಗೆ ಬಗೆಹರಿಸಿಕೊಳ್ಳುವ ಮಾರ್ಗವೇನಾದರೂ ಇದೆಯೇ?**

ಖಂಡಿತ. ಬೆಂಗಳೂರಿನ ಪೊಲೀಸ್ ಕಮೀಷ್ನರ್ ಕಚೇರಿಯಲ್ಲಿ 'ಸಹಾಯ ವಾಣಿ' ಇದೆ. ಮಹಿಳೆಯರಿಗಾದರೆ ವನಿತಾ ಸಹಾಯ ವಾಣಿ. ಪುರುಷರಿಗಾದರೆ ಸಹಾಯ ವಾಣಿ ಇದೆ. ಅಲ್ಲಿ ಕರೆ ಮಾಡಿ ಸಮಸ್ಯೆಯನ್ನು ಹೇಳಿಕೊಳ್ಳಬಹುದು (ಎಲ್ಲ ಸಹಾಯವಾಣಿಗಳ ದೂರವಾಣಿ ಸಂಖ್ಯೆ 100). ದಂಪತಿಯನ್ನು ಕರೆಸಿ ಆಪ್ತ ಸಮಾಲೋಚನೆ ಮಾಡಲಾಗುತ್ತದೆ. ಇದಷ್ಟೇ ಅಲ್ಲದೇ ಹಲವು ಆಪ್ತ ಸಮಾಲೋಚಕರೂ ಈ ನಿಟ್ಟಿನಲ್ಲಿ ನೆರವಾಗುತ್ತಾರೆ. ನನ್ನ ಬಳಿಯೇ ಬಂದಿರುವ ಹಲವಾರು ಉದಾಹರಣೆಗಳೂ ಇವೆ. ಎಲ್ಲ ಪ್ರಕರಣಗಳಲ್ಲಿ ಇಬ್ಬರನ್ನೂ ತಿದ್ದುವುದು ಸಾಧ್ಯವಾಗದಿದ್ದರೂ, ಕೆಲವು ಪ್ರಕರಣಗಳಲ್ಲಿ ಆಪ್ತ ಸಮಾಲೋಚನೆಯಿಂದ ತಪ್ಪಿನ ಅರಿವಾಗುವುದೂ ಇದೆ.